

ಬೀಸ್ಪೋಕ್ ವಿನ್ಯಾಸಗೊಳಿಸಿರುವ ಉಡುಪಿನಲ್ಲಿ ವರನ ತಂದೆ.

ಮದುವೆ ಜೀವನದ ಒಂದು ವಿಶೇಷ ಸಂಭ್ರಮವಾಗಿದ್ದು ಪ್ರತಿಯೊಬ್ಬರು ವಿಶೇಷವಾಗಿ ಕಾಣಿಸಿಕೊಳ್ಳುವ ಆಸೆ ಇರುತ್ತದೆ. ಈ ಆಸೆಗಳಿಗೆ ಜೀವತುಂಬಿ ಆಕರ್ಷಣೀಯವಾದ ಸೂಟ್‌ಗಳಿಂದ ಮದುವೆಯಲ್ಲಿರುವ ಎಲ್ಲ ಪುರುಷರನ್ನು ಅಲಂಕರಿಸಿ, ಬಂದವರಿಗೆ ಆಕರ್ಷಕ ವಿನ್ಯಾಸಗಳನ್ನು ರೂಪಿಸಿ ಸಂಬಧಿಸಿದ ಟೇಲರಿಂಗನ್ನು ನಿರ್ವಹಿಸಿ ಆಕ್ಸೆಸರಿ ಮತ್ತು ಫ್ಯಾಬ್ರಿಕ್‌ಗಳನ್ನು ಒಂದೇ ಸೂರಿನಡಿ ಪಡೆಯಬಹುದಾದ ಕೇಂದ್ರ 108 ಬೀಸ್ಪೋಕ್. ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟಿಗರು, ವಿಜ್ಞಾನಿಗಳು, ಸಿನಿಮಾ ತಾರೆಯರಿಗೆ 108 ಬೀಸ್ಪೋಕ್ ಉಡುಪುಗಳನ್ನು ನೀಡಿ ಟ್ರೆಂಡ್ ಸೆಟ್ಟರ್ ಆಗಿದೆ. 108 ಬೀಸ್ಪೋಕ್ ಬೆಂಗಳೂರಿನ ಇಂದಿರಾ ನಗರದಲ್ಲಿದೆ. ನಾವು ಬರಿ ವಸ್ತ್ರವಿನ್ಯಾಸಕರಲ್ಲ ಸೆಲೆಬ್ರೆಟಿಗಳ ಫ್ಯಾಶನ್ ನಿರುಪಿಸುವವರು.
ಸಂಪರ್ಕಿಸಿ : ಭರತ್ ಜೈನ್ ಪಾಲುದಾರರು. ದೂರವಾಣಿ ಸಂಖ್ಯೆ: 8088801108, 9449266669, ವಿಳಾಸ: 383, ಮೊದಲನೇ ಮಹಡಿ, 100 ಅಂಗುಲ ರಸ್ತೆ, ಹೆಚ್‌ಎಎಲ್ ಎರಡನೇ ಹಂತ, ಇಂದಿರಾ ನಗರ, ಬೆಂಗಳೂರು–38



ಬೀಸ್ಪೋಕ್ ವಿನ್ಯಾಸ ಮಾಡಿರುವ ಉಡುಪಿನಲ್ಲಿ ವರ.




## ಕಪ್ಪು-ಬಿಳುಪು

ವಿಜಾಪುರದ ಹಿರಿಯ ಸಾಹಿತಿ, ನ್ಯಾಯವಾದಿ ವಿದ್ಯಾವತಿ ಅಂಕಲಗಿ ಅವರು ತಮ್ಮ ಪತಿ ಕೆ.ಎಫ್.ಅಂಕಲಗಿ ಅವರೊಂದಿಗಿನ ನಲವತ್ತೆರಡು ವರ್ಷಗಳ ದಾಂಪತ್ಯ ಬದುಕಿನ ಬಗ್ಗೆ ಸವಿವರವಾಗಿ ಈ ಅಂಕಣದಲ್ಲಿ ಹಂಚಿಕೊಂಡಿದ್ದಾರೆ.

# ನನ್ನ ಸಾಧನೆಗೆ ನನ್ನ ಪತಿರಾಯರೇ ಸ್ಫೂರ್ತಿ

• ವಿದ್ಯಾವತಿ ಅಂಕಲಗಿ

ಅಂದೊಮ್ಮೆ ನಾನು ಮನೆಯ ಎದುರು ನಮ್ಮ ಕಾಕಾನ ಮಗನಿಗೆ ಚಮಚೆಯಲ್ಲಿ ಹಾಲು ಕುಡಿಸುತ್ತ ಕುಳಿತುಕೊಂಡಿದ್ದೆ. ಆಗ ಅವರು ಸರಸರನೇ ಬಂದವರು, ನಿನ್ನ ತಂದೆ ಮನೆಯಲ್ಲಿ ಇದ್ದಾರಾ ? ಎಂದು ಏಕವಚನದಲ್ಲಿ ಕೇಳಿದರು. ಆಗ ನಾನು ಚಿಕ್ಕ ಮಗುವಲ್ಲ! ಪಿಯು ಓದುವ ಹುಡುಗಿ, ನನಗಂತೂ ತುಂಬಾ ಕೋಪ ಬಂದಿತ್ತು. ಏನ್ರಿ... ಹೆಣ್ಮಕ್ಕಳ ಜತೆಗೆ ಸರಿಯಾಗಿ ಮತಾಡಕ್ಕ ಬರುದಿಲ್ಲೇನು ಎಂದು ತರಾಟೆ ತೆಗೆದುಕೊಂಡಿದ್ದೆ. ಆಗ ಅವರು, 'ಆಗ್ರಾಕ್ಕೆ ತಾಜ್‌ಮಹಲ್ ನೋಡಲು ಹೋಗಿದ್ದೆ. ನಿನ್ನ ತಂದೆಗೋಸ್ಕರ ಸ್ವೆಟರ್, ಸ್ಕಾರ್ಫ್ ತಂದೀನಿ. ಅವರಿಗಿ ಕೊಡ್ಬೇಕು' ಎಂದು ಹೇಳಿ ನನ್ನ ಕೈಗೆ ಸ್ವೆಟರ್ ಮತ್ತು ಸ್ಕಾರ್ಫ್ ಕೊಟ್ಟು ಹೋದರು. ಅಂದು ಅವರನ್ನು ಮನೆಯೊಳಗೂ ನಾನು ಕರೆದಿರಲಿಲ್ಲ...! ಮದುವೆ ಮುನ್ನ ನಡೆದ ಈ ಪ್ರಸಂಗ ಮಾತ್ರ ನನ್ನ ಸ್ಮೃತಿಪಟಲದಲ್ಲಿ ಭದ್ರವಾಗಿ ನೆಲೆಯೂರಿದೆ.

ನಮ್ಮ ಅಜ್ಜ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅಲ್ಲದೆ ನಮ್ಮ ತಂದೆ ಆರ್.ಬಿ. ಕೊಂಡಗೂಳಿ (ತಳವಾರ) ಅವರು ರಾಜಕೀಯ ಮುಖಂಡರ ಒಡನಾಟದಿಂದ ಸಮಾಜ ಸೇವೆ ಮಾಡುತ್ತಿದ್ದರು. ಅಂದೊಮ್ಮೆ ಎಂ.ಪಿ. ಕಾಳಿಂಗಪ್ಪ ಚೌಧರಿ ಅವರ ಸಹೋದರಿ ಮದುವೆ ಸಮಾರಂಭಕ್ಕಾಗಿ ವಿಜಯಪುರಕ್ಕೆ ನನ್ನ ಪತಿ ಕೆ.ಎಫ್. ಅಂಕಲಗಿ ಅವರು ಬೆಂಗಳೂರಿನಿಂದ ಬಂದಿದ್ದರು. ಆ ವೇಳೆ ತಮ್ಮ ಸ್ನೇಹಿತರೊಂದಿಗೆ ನಮ್ಮ ಮನೆಗೂ ಬಂದಾಗ, ಮನೆಯಲ್ಲಿದ್ದ ನನ್ನನ್ನು ನೋಡಿ ಅವರು ಇಷ್ಟಪಟ್ಟಿದ್ದಾರೆ. ಅನಂತರ ಮದುವೆ ಮಾಡಿಕೊಳ್ಳುವ ಕುರಿತು ನಮ್ಮ ತಂದೆಯವರ ಎದುರು ತಮ್ಮ ಮನದಿಚ್ಛೆಯನ್ನು ಹೇಳಿದ್ದಾರೆ. ನಮ್ಮ ತಂದೆ ಮತ್ತು ಅವರ ಮಧ್ಯೆ ಮದುವೆ ಕುರಿತು ಮಾತುಗಳಾಗಿವೆ. ಆದರೆ, ಈ ಕುರಿತು ನನಗೆ ಯಾವ ಸುದ್ದಿಯೂ ತಿಳಿದಿರಲಿಲ್ಲ. ಅಲ್ಲದೆ ನಮ್ಮ ತಂದೆಯವರೂ ಕೂಡ ಏನೂ ಹೇಳಿರಲಿಲ್ಲ. ಅಂದು ನನ್ನ ಪತಿ ತಮ್ಮ ಸ್ನೇಹಿತರೊಂದಿಗೆ ಮನೆಗೆ ಬಂದಾಗ ಅವರನ್ನು ನಾನು ಗಮನಿಸಿಯೂ ಇರಲಿಲ್ಲ.



ಅದನ್ನು ಸ್ಮರಿಸಿಕೊಂಡರೆ ಸಾಕು ಇನ್ನೂ ನನಗೆ ನಗು ತರಿಸುತ್ತದೆ.

ನಾನು ಅದೇತಾನೆ ಪಿಯು ಮುಗಿಸಿ, ಪದವಿ ಕಲಿಯಲು ಮುಂದಾಗಿದ್ದೆ. ನನ್ನ ಪತಿ ಬೆಂಗಳೂರಿನಲ್ಲಿ ಎಲ್‌ಎಲ್‌ಬಿ ಅಂತಿಮ ಪರೀಕ್ಷೆ ಬರೆದಿದ್ದರು. ಅಂದು ವಿಜಯಪುರಕ್ಕೆ ಮದುವೆಗೆ ಬಂದವರು, ನಮ್ಮ ತಂದೆಯವರೊಂದಿಗೆ ಮದುವೆ ವಿಷಯ ಮಾತನಾಡಿದ ಕೆಲ ದಿನಗಳ ನಂತರ, ನನಗೂ ವಿಷಯ ಗೊತ್ತಾಯಿತು. ಆದರೆ ಹುಡುಗ ಯಾರು ಎನ್ನುವುದು ತಿಳಿದಿರಲಿಲ್ಲ. ಮನೆಯಲ್ಲಿ ಕೇಳಿದಾಗ, ಹುಡುಗ ವಕೀಲನಾಗಿದ್ದಾನೆ. ಆತ ನಮ್ಮ ಮನೆಗೆ ಬಂದಾಗ ನಿನ್ನನ್ನು ನೋಡಿದ್ದಾನೆ ಎಂದು ಹೇಳಿದರು. ಆದರೆ ವಕೀಲ ಎನ್ನುವ ಪದವೇ ನನ್ನ ತಲೆಯಲ್ಲಿ ಪ್ರಶ್ನೆಯಾಗಿ ಉಳಿಯಿತು. ಅಂದು ಮನೆಗೆ ಬಂದವರು ಐದು ಜನರು. ಅವರನ್ನು ಸರಿಯಾಗಿ ನೋಡಿದ ನೆನಪಿಲ್ಲ. ಈ ವಕೀಲ ಯಾರಿರಬಹುದು ಎಂದು ಕುತೂಹಲ ಹಾಗೂ ಗೊಂದಲವೂ ಮೂಡಿತ್ತು. ಅಂದು ಮನೆಯಲ್ಲಿ ಹಿರಿಯರು ಹೇಳಿದ್ದೆ ಅಂತಿಮ. ಸುಮ್ನೇ ತಲೆಕೆಡಿಸಿಕೊಳ್ಳುವುದು ಬ್ಯಾಡ, ಹಿರಿಯರು ಹೇಳೋದೆಲ್ಲ ಒಳ್ಳೆಯದಕ್ಕೆ ಎಂದು ನಾನು ಸುಮ್ಮನಾದೆ.

ನಾನು ಎಂಟನೆ ವರ್ಷದವಳಾಗಿದ್ದಾಗಲೇ ಸ್ಟೌವ್ ಸ್ಫೋಟಗೊಂಡು ಬೆಂಕಿ ತಗುಲಿ ತಾಯಿ ಮೃತಪಟ್ಟಿದ್ದಳು. ತಾಯಿಯನ್ನು ಕಳೆದುಕೊಂಡಿದ್ದರಿಂದ, ನಮ್ಮ ತಂದೆಯೂ ನನ್ನ ಮದುವೆಗೆ ಕೂಡಲೇ ಸಿದ್ಧತೆ ಮಾಡಿದರು. ನನ್ನ ಪತಿರಾಯರು ಅಷ್ಟೇ ಯಾವುದೇ ರೀತಿ ವರದಕ್ಷಿಣೆ ಪಡೆಯಲಿಲ್ಲ. ತಮ್ಮ ಖರ್ಚಿನಲ್ಲಿಯೇ ನನಗೂ, ತಮಗೂ ಬಟ್ಟೆ ಬರೆಯನ್ನು ಖರೀದಿಸಿ, ಸರಳವಾಗಿ 1975 ರಲ್ಲಿ ಮದುವೆ ಮಾಡಿಕೊಂಡರು. ಆಗ ನಾನು ಪದವಿ ಪ್ರವೇಶ ಪಡೆದಿದ್ದರೂ, ಸಾಂಸಾರಿಕ ಜವಾಬ್ದಾರಿ ಹೊತ್ತುಕೊಂಡ ನಂತರ ವಿದ್ಯಾಭ್ಯಾಸವನ್ನು ಮೊಟಕು ಮಾಡುವಂತಾಯಿತು.

ಮದುವೆಯಾಗಿ ನಮಗೆ ನಾಲ್ಕು ಮಕ್ಕಳಾದ ನಂತರ ಮತ್ತೆ ನನಗೆ ಓದು-ಬರದ ಕುರಿತು ಆಸಕ್ತಿ ಮೊಳೆಯತೊಡಗಿತು. ಆಗ ಅವರು ನೀನು ಪದವಿ ಮುಗಿಸಿಕೋ ಎಂದು ಹೇಳಿದರು. ಮತ್ತೆ ನಾನು ಪದವಿ ಪ್ರವೇಶ ಪಡೆದು, ಮಕ್ಕಳೊಂದಿಗೆ ಸೇರಿ ನಾನೂ ಓದಿದೆ. ಬರೀ ಪದವಿ ಅಷ್ಟೇ ಅಲ್ಲದೆ, ನನ್ನ ಪತಿಯಂತೆ ನಾನೂ ವಕೀಲಳಾಗಬೇಕು ಎನ್ನುವ ಹಂಬಲವೂ ಶುರುವಾಯಿತು. ಆಗ ಕೆಲವರು ಸಂಸಾರದ ಜತೆಗೆ ಎಲ್‌ಎಲ್‌ಬಿ ಮಾಡುವುದು ಬಹಳ ಕಠಿಣವಾಗುತ್ತದೆ ನೋಡು ಎಂದರು. ನಾನು ಅವರ ಯಾವುದೇ ಮಾತಿಗೆ ಕಿವಿಗೊಡದೆ, ಕನ್ನಡದಲ್ಲಿ ಎಲ್‌ಎಲ್‌ಬಿ ಪದವಿ ಮಾಡಿದೆ. ಇದರ ಜತೆಗೆ ಮೊದಲಿನಿಂದಲೂ ಸಾಹಿತ್ಯದ ಜತೆಗೆ ಯಾವತ್ತೂ ಒಡನಾಟವಿದ್ದೇ. ಹಾಗೇ ಬರೆದ ಕವಿತೆಗಳನ್ನು ನನ್ನ ಪತಿರಾಯರಿಗೆ ತೋರಿಸುತ್ತಿದ್ದೆ. ಅವರು ಅದನ್ನು ಓದಿ ಪ್ರೋತ್ಸಾಹಿಸುತ್ತಿದ್ದರು. ಹೀಗೆ ಐದು ಮಕ್ಕಳ ಜತೆಗೆ ನಾನೂ ಪದವಿ, ಎಲ್‌ಎಲ್‌ಬಿ ಪರೀಕ್ಷೆ ಬರೆದು ಸಾಹಿತ್ಯ ಕ್ಷೇತ್ರದ ಜತೆಗೆ ಸಾಮಾಜಿಕ ಕ್ಷೇತ್ರದಲ್ಲೂ ಗುರುತಿಸಿಕೊಂಡೆ. ಇದು ನನಗೆ ತುಂಬಾ ಹೆಮ್ಮೆ ಎನಿಸುತ್ತದೆ. ಮಕ್ಕಳ ಜತೆಗೆ ನಾನೂ ಮಗುವಾಗಿ ಓದಿದ್ದು, ತುಂಬಾ ಸ್ಮರಣೀಯ. ಅಲ್ಲದೆ ಎಲ್‌ಎಲ್‌ಬಿ ಮುಗಿಸಿ ಹದಿನೆಂಟು ವರ್ಷ ಸತತ ಪ್ರಾಕ್ಟೀಸ್ ಮಾಡಿರುವುದು ನನಗೆ ತೃಪ್ತಿ ತಂದಿದೆ. ಪ್ರತಿಯೊಂದು ನನ್ನ ಸಾಧನೆಗೆ ನನ್ನ ಪತಿರಾಯರೇ ಸ್ಫೂರ್ತಿ. ತಮ್ಮ ವಕೀಲ ವೃತ್ತಿಯೊಂದಿಗೆ, ನನಗೂ ಅಕ್ಷರ ಸಂಗ ಬೆಳೆಸಿದವರು. ಅವರ ಪ್ರೇರಣೆ, ಪ್ರೋತ್ಸಾಹದಿಂದ ಬಂಡಾಯ ಸಾಹಿತಿ ಎಂದೂ ಗುರುತಿಸಿಕೊಂಡೆ. ಸಾಹಿತ್ಯ ಕೃಷಿಯ ಜತೆಗೆ ನಾನು ವಕೀಲ ವೃತ್ತಿ ಮಾಡಿರುವುದು ನನ್ನ ಅಮೋಘ ಸಾಧನೆ.

ನನ್ನ ಈ ತುಂಬು ಸಂಸಾರದ ಕುಟುಂಬದಲ್ಲಿ ನನ್ನ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡಿದ್ದೇನೆ. ಐದು ಜನ ಮಕ್ಕಳಲ್ಲಿ, ಮೂವರು ಪುತ್ರಿಯರು, ಇಬ್ಬರು ಪುತ್ರರು. ಎಲ್ಲರೂ ತಮ್ಮ ಬದುಕಿನ ಪಯಣದಲ್ಲಿ ಸಾಗುತ್ತಿದ್ದಾರೆ. ಪುತ್ರಿಯರಿಬ್ಬರು ಅಮೆರಿಕಾದಲ್ಲಿದ್ದಾರೆ. ಇದು ನಮಗೆ ಹೆಮ್ಮೆಯ ಸಂಗತಿಯೇ. ಇನ್ನು ಇದು ಬಿಟ್ಟರೆ ನಾವು ಸುಖಿ ಕುಟುಂಬ. ಮಕ್ಕಳು, ಮೊಮ್ಮಕ್ಕಳೊಂದಿಗೆ ಸಾಹಿತ್ಯ ಕೃಷಿಯಲ್ಲಿ ನೆಮ್ಮದಿಯಿಂದ ಇದ್ದೇನೆ.

**ನಿರೂಪಣೆ: ಪರಶುರಾಮ ಶಿವಶರಣ**

## ಪಟ ಪಟ



ಕೃಪೆ: ನವೀನ್ ಬಸವರಾಜು. ಇಂಚರ ಫೋಟೋ ಸ್ಟುಡಿಯೋ

**ಎಳೀಬೇಡ್ರೀ** ವರ ಶಶಾಂಕ್ ವಧು ಸ್ಫೂರ್ತಿಯನ್ನು ಎಳೆದೊಯ್ಯುತ್ತಿರುವ ಪರಿ.

ನಿಮ್ಮ ಸಂಬಂಧಿಕರ, ಸ್ನೇಹಿತರ ಮದುವೆಯ ತಮಾಷೆ ಪ್ರಸಂಗದ ಫೋಟೋಗಳಿದ್ದಲ್ಲಿ ನಮಗೆ ಮೇಲ್ ಮಾಡಿ. **vivah@vishwavani.news**

2016ರ ಮೇನಲ್ಲಿ ಮತ್ತೆ ಚಿಕಿತ್ಸೆ ಆರಂಭವಾಯ್ತು. ಚಿಕಿತ್ಸೆಯಾದ ಕೆಲದಿನ ಅವಳು ಆಸ್ಪತ್ರೆಯಲ್ಲೇ ಇದ್ದಳು. ಅವಳ ಜನ್ಮದಿನವೂ ಹತ್ತಿರವಿತ್ತು, ಅವನು ಅವಳ ಕನಸನ್ನು ಸಾಕಾರಗೊಳಿಸಲು ಗುಟ್ಟಾಗಿ ಹೊರಟಿದ್ದ ವೈದ್ಯರು ಮತ್ತೆ ಕೆಟ್ಟ ಸುದ್ದಿ ಹೊತ್ತು ತಂದರು. ಅವಳ ಕಾನ್ಸರ್ ಕಣ ಮಿದುಳಿಗೂ ಹರಡಿದೆ. ಅವಳಿನ್ನು ಕೆಲವು ದಿನ, ವಾರವಷ್ಟೇ ಬದುಕಬಹುದು ಎಂದರು.



# ಕನಸಿನ ಕಣ್ಮಣಿ ಕ್ಯಾನ್ಸರ್‌ಗೆ ತುತ್ತಾದಾಗ...

• ಶುಭಶ್ರೀ ಭಟ್ಟ

ಯೌವನದ ಬಿಸುಪಿನಲ್ಲಿ ಪ್ರೀತಿಯ ಮಳೆಯಲ್ಲಿ ನೆನೆದು, ಕಾವು ತಣ್ಣಗಾದ ಮೇಲೆ ದೂರಾಗುವಷ್ಟು ಬಲಹೀನವಾಗಿರಲಿಲ್ಲ ಅವರ ಪ್ರೀತಿ. ಮದುವೆಯಾಗದಿದ್ದರೂ ಅವರಿಬ್ಬರದು ಅನುರೂಪ ದಾಂಪತ್ಯ. ಅದಕ್ಕೆ ಸಾಕ್ಷಿಯಾಗಿ ಮುದ್ದಾದ ಪುಟ್ಟ ಜೀವಗಳೆರಡು. ತನ್ನ ಪುಟ್ಟ ಜೀವಗಳೆದುರು ಆ ಜೀವಕ್ಕೆ ಉಸಿರಾದವನನ್ನು ವೈಭವೋಪೇತವಾಗಿ ಮದುವೆಯಾಗುವುದು ಅವಳ ಕನಸಾಗಿತ್ತು. ಅದು ಅವನ ಇಷ್ಟದ ಕನಸುಗಳಲ್ಲೊಂದಾಗಿತ್ತು.

ಅವರಿಬ್ಬರು ಆ ಕನಸಿನರಮನೆಗೆ ತಳಪಾಯ ಹಾಕಲು ಶುರುಮಾಡಿಕೊಂಡಿದ್ದರು. ಆದರೆ ಅದೊಂದು ದಿನ ಫೆಬ್ರವರಿ 2016ರಲ್ಲಿ ಆಸ್ಪತ್ರೆಯಿಂದ ಬಂದ ಕರೆಯೊಂದು ಅವರಿಬ್ಬರ ಕನಸಿನ ಅರಮನೆಯನ್ನು ಬುಡಸಮೇತ ಭಸ್ಮ ಮಾಡಬಲ್ಲದು ಎಂದು ಅವರು ಯೋಚಿಸಿರಲೂ ಇಲ್ಲ. ಅತ್ತ ಕಡೆಯಿಂದ ವೈದ್ಯರು ಹೇಳಿದ್ದು ಕಳೆದವಾರ ಅವಳು ಪಾದಕ್ಕೆ ಮಾಡಿಸಿಕೊಂಡ 'ಕಾನ್ಸರ್ ಬಯಾಪ್ಸಿ'ಯ ಕುರಿತು. ಆ ಮಾತು ನಿಂತ ನೆಲವನ್ನೇ ಅಲುಗಾಡಿಸಿಬಿಟ್ಟಿತ್ತು. ಮೊದಲು ಅವನೇ ಚೇತರಿಸಿಕೊಂಡು ಮೇಲೆದ್ದ. ಅವಳನ್ನೂ ಮೇಲೇಳುವಂತೆ ಮಾಡಿದ. ಪುಟ್ಟ ಜೀವಗಳಿಗೋಸ್ಕರವಾದ್ರೂ ನೀನು ಹೋರಾಡಲೇ ಬೇಕೆಂದು ಅವಳ ಕರ್ತವ್ಯ ನೆನೆಪಿಸಿದ. ಆಗಷ್ಟೇ ಪಾದಗಳಲ್ಲಿ ಜೀವ ಕಳೆದುಕೊಂಡ ಜೀವವೊಂದು ಎಲ್ಲವನ್ನೂ ಎದುರಿಸಿ ಹೋರಾಡಲು ಸಜ್ಜಾಗಿ ನಿಂತಿತು.

ಅಂತೂ ಕೀಮೋಥೆರಪಿಯು ಶುರುವಾಗಿತ್ತು. 3-4 ವಾರಗಳ ಅಸಾಧ್ಯ ನೋವಿನ ನಂತರವೂ ತನ್ನ ಜೀವನ ಮೊದಲಿನಂತೆ ಆಗಬಲ್ಲುದೆಂಬ ಭರವಸೆಯನ್ನು ಹೊತ್ತು ಅವಳು ಮತ್ತವಳ ಕುಟುಂಬ ಕಾದು ಕುಳಿತಿತ್ತು. ಆದರೆ, ಅದರ ಫಲಿತಾಂಶ ಮಾತ್ರ ಸಹಿಸಲಾಗದಷ್ಟು ಕಹಿಯಾಗಿತ್ತು. ಕಾನ್ಸರ್ ಕಣಗಳು ಅದಾಗಲೇ ಅವಳ ಶ್ವಾಸಕೋಶಕ್ಕೇ ದಾಳಿಯಿಟ್ಟುಬಿಟ್ಟಿತ್ತು. ಅವಳ ಕಾಲನ್ನು ಕತ್ತರಿಸಲೇಬೇಕೆಂದು ವೈದ್ಯರು ಹೇಳಿದರು. ಆದರೆ, ಅವಳು ಕಾಲನ್ನು ಕತ್ತರಿಸಲು ಒಪ್ಪಲೇ ಇಲ್ಲ. ಅವನು, ವೈದ್ಯರು, ಕುಟುಂಬದವರೆಲ್ಲರೂ ಮನವೊಲಿಸಿದಾಗ ಒಲ್ಲದ ಮನಸ್ಸಿಂದ ಒಪ್ಪಿಕೊಂಡಳು. ಮೇ 2016ರಲ್ಲಿ ಮತ್ತೆ ಚಿಕಿತ್ಸೆ ಆರಂಭವಾಯ್ತು. ಚಿಕಿತ್ಸೆಯಾದ ಕೆಲದಿನ ಅವಳು ಆಸ್ಪತ್ರೆಯಲ್ಲೇ ಇದ್ದಳು. ಅವಳ ಜನ್ಮದಿನವೂ ಹತ್ತಿರವಿತ್ತು. ಅವನು ಅವಳ ಕನಸನ್ನು ಸಾಕಾರಗೊಳಿಸಲು ಗುಟ್ಟಾಗಿ ಹೊರಟಿದ್ದ. ವೈದ್ಯರು ಮತ್ತೆ ಕೆಟ್ಟ ಸುದ್ದಿ ಹೊತ್ತು ತಂದರು. ಅವಳ ಕಾನ್ಸರ್ ಕಣ ಮಿದುಳಿಗೂ ಹರಡಿದೆ. ಅವಳಿನ್ನು ಕೆಲವು ದಿನ, ವಾರವಷ್ಟೇ ಬದುಕಬಹುದು ಎಂದರು.

ಅವಳ ಮದುವೆಯ ಕನಸನ್ನು ನನಸು ಮಾಡಿ ಅವಳ ಹುಟ್ಟುಹಬ್ಬಕ್ಕೆ ಉಡುಗೊರೆ ಕೊಡಲು ಹೊರಟಿದ್ದ ಅವ ಮತ್ತೆ ಕುಸಿದುಬಿದ್ದ. ಅವ ಒಳಗಿನಿಂದ ಮತ್ತೆಂದೂ ಚೇತರಿಸಿಕೊಳ್ಳಲೇ ಇಲ್ಲ. ಆದರೆ, ಅವಳೆದುರು, ಮಕ್ಕಳೆದುರು ನಗುವಿನ ಮುಖವಾಡ ತೊಟ್ಟು, ಹೊಸ ನಾಟಕಕ್ಕೆ ಸಜ್ಜಾದ. ಅವಳನ್ನು ಮದುವೆಯಾಗುತ್ತೇನೆಂದಾಗ ಅವಳೇ ದುಡ್ಡು ದಂಡ ಬೇಡವೆಂದಳು. ಅವ ಹನಿಗಣ್ಣಾಗಿ ನಿವೇದಿಸಿಕೊಂಡ ನಂತರ ಒಪ್ಪಿಗೆ ಕೊಟ್ಟಳು. ಮದುವೆಯ ನಂತರ ಕೃತಕ ಉಸಿರಾಟದ ವ್ಯವಸ್ಥೆಯನ್ನು ಹೊತ್ತು ಅವಳನ್ನು ಮನೆಗೇ ಕರೆತಂದನವ. ಆ ದಿನ ಅವಳಲ್ಲಿ ಸತ್ತು ಹೋದ ಕನಸುಗಳೆಲ್ಲಾ ಮತ್ತೆ ಜೀವತಳೆದವು.

ಮಕ್ಕಳಿಗಾಗಲೇ ಅವರಮ್ಮ ಬೇಗ ಏಸುವಿದ್ದ ಸ್ವರ್ಗಕ್ಕೆ ಹೋಗಲಿದ್ದಾಳೆಂದು ಸೂಕ್ಷ್ಮವಾಗಿ ತಿಳಿಸಿ ಅವರನ್ನು ಮಾನಸಿಕವಾಗಿ ಸಜ್ಜು ಮಾಡತೊಡಗಿದ್ದ. ಸಾವು ಅಂದರೇನು, ಸ್ವರ್ಗವೆಂದರೇನು ಎಂಬುದರ ಅರಿವಿರದ ಅವರ ನಾಲ್ಕು ವರ್ಷದ ಪುಟ್ಟ ಮಗಳು ಬಿಕ್ಕಿ ಬಿಕ್ಕಿ ಅಳುತ್ತಿದ್ದ ತನ್ನಣ್ಣನನ್ನೇ ಮೂಕಳಾಗಿ ನೋಡುತ್ತಿದ್ದಳು. ಮಕ್ಕಳ ಮುಖ ನೋಡುತ್ತಾ ತನ್ನ ಅಸಾಧ್ಯ ನೋವನ್ನು ಮರೆತು ಆ ಭಯಾನಕ ಕಾನ್ಸರ್ ಕಣಗಳೊಡನೆ ಅವಳು ಮಾಡುತ್ತಿದ್ದ ಹೋರಾಟ ಅವನನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿತ್ತು. ಅವನು ತಾವು ಕಳೆದ ಸುಂದರ ಕ್ಷಣಗಳನ್ನು ನೆನಪಿಸಿಕೊಡುತ್ತಾ, ತಮ್ಮ ಕನಸಿನ ಮದುವೆಯ ಚಿತ್ರವನ್ನು ಪದೇ ಪದೇ ಅವಳಿಗೆ ತೋರಿಸುತ್ತಾ ಅವಳನ್ನು ಖುಷಿಯಾಗಿಡಲು ಪ್ರಯತ್ನಿಸುತ್ತಿದ್ದ. 'ಮಕ್ಕಳೆಂದೂ ನಿನ್ನ ಮರೆಯದಂತೆ ನಾನು ನೋಡಿಕೊಳ್ಳುತ್ತೇನೆ' ಎಂಬ ಮಾತನ್ನು ಅವಳಿಗೆ ದಿನವೂ ಹೇಳುತ್ತಾ ಅವಳನ್ನೂ ಸಾವೆಂಬ ಯುದ್ಧಕ್ಕೆ ತಯಾರು ಮಾಡಿದ್ದ. ಅವನಿದ್ದರೆ ಯಾವ ಮೃತ್ಯುವೂ ಬಳಿಬರದೆಂಬ ಭಂಡ ಧೈರ್ಯ ಅವಳದ್ದು. ಹೀಗಿದ್ದೂ ಅವರ ಪ್ರೀತಿಗೆ ವಿಧಿ ಸಾವಿನ ಕುಣಿಕೆ ಹಾಕಿದ್ದ. ಹೋರಾಡುತ್ತಲೇ ಇದೇ ಜೂನ್ 2017ರಂದು ಕಾಲನ ಕುಣಿಕೆಗೆ ಕುತ್ತಿಗೆಯೊಡ್ಡಿದಳು. ಹೌದು ನಾನು ಮಾತನಾಡುತ್ತಿರುವುದು ಪ್ರೀತಿಗಾಗಿ, ಪ್ರೀತಿಯ ಕುಡಿಗಳಿಗಾಗಿ ಕಾನ್ಸರ್ ಜತೆ ಹೋರಾಡುತ್ತಲೇ ಜೀವತೆತ್ತ ನ್ಯೂಯಾರ್ಕ್‌ನ 'ರೊಂಡಾ ಬಿವೆನ್ಸ್' ಮತ್ತು ಅವಳ ಜೀವ 'ಮ್ಯಾಟ್ ಮೇಗರ್ಸ್'ರ ಕುರಿತು. ಅವರ ಕುಟುಂಬದಲ್ಲಿ ಅವಳ ದೇಹವಿಲ್ಲವೀಗ, ಆದರೆ ಅವಳು ಕೊಟ್ಟ ಪ್ರೀತಿಯೇ ಜನ್ಮಕ್ಕಾಗುವಷ್ಟಿದೆಯೆಂದು ನಿಟ್ಟುಸಿರಾಗುತ್ತಾರೆ ಮ್ಯಾಟ್. ಎದುರಿಗೆ ಎಷ್ಟೇ ನಗುನಗುತ್ತಲಿದ್ದರೂ, ಅಂತರ್ಯದಲ್ಲಿ ಅವರ ನೋವಿನಾಳ ಅಪಾರ. ಅವರ ಕುಟುಂಬಕ್ಕೆ ಪ್ರೀತಿಯ ನೆರಳು ಸದಾ ಇರಲೆಂದು ಹಾರೈಸೋಣ.

## ವಧು ಪರೀಕ್ಷೆ

ಎರಡು ತಾಸಿನ ಬಳಿಕ ಕಾರಿನಲ್ಲಿ ಅವರ ತಮ್ಮ ಹಾಗೂ ಅವರ ಪತ್ನಿಯೊಂದಿಗೆ ನನ್ನ ಅಮ್ಮ ಬಂದರು. ಅಮ್ಮ ಮಾತ್ರ ಅತ್ತಿಂದಿತ್ತ ಗಾಬರಿಯಲ್ಲೇ ಓಡಾಡುತ್ತಿದ್ದರು. ಏನಾಯಿತು ಎಂದು ಕೇಳಿದರೆ 'ಏನಿಲ್ಲ ಮೊದಲು ಊಟ ಮಾಡು ಸುಸ್ತಾಗಿರತ್ತೆ ನಿಂಗೆ' ಎಂದು ಹೇಳಿ ಕಾಫಿ ಮಾಡಿ ಪ್ಲಾಸ್ಟಿಕ್‌ನಲ್ಲಿ ಹಾಕಿ ತಮ್ಮನ ಕೈಗೆ ಕೊಟ್ಟು ಕಳುಹಿಸಿದರು.

# ಅಪ್ಪನ ನೆನಪು ಕಾಡಿದಾಗ...

• ಮೇಘ.ಎಂ.ಎಸ್ ಶಿವಮೊಗ್ಗ

ಮನೆಯಲ್ಲಿ ಹೆಣ್ಣು ಇದ್ದರೆ ಮನೆ ಹಾಗೂ ಮನ ಬೆಳಗಿದಂತೆ ಎಂಬ ಮಾತಿದೆ. ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿದ್ದರೆ ಅವರನ್ನು ಎಷ್ಟು ಬೇಗ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳಬೇಕೆಂಬ ತವಕ ತಂದೆ ತಾಯಿಗಿರುವುದು ಸರ್ವೇಸಾಮಾನ್ಯ. ಅದರಂತೆ ನಮ್ಮ ಮನೆಯಲ್ಲೂ. ಮಗಳನ್ನು ಒಳ್ಳೆಯ ಕುಟುಂಬಕ್ಕೆ ಸೇರಿಸಬೇಕೆಂದು ಅಪ್ಪಾ ಒಳ್ಳೊಳ್ಳೆ ಸಂಬಂಧಗಳ ಹುಡುಕಾಟದಲ್ಲಿ ನಿರತರಾದರು.

ನಮ್ಮೂರಿನವರೇ ಆ ವರ. ಮನೆಯವರೆಲ್ಲಾ ಹುಡುಗನ ಫೋಟೋ ನೋಡಿದ್ದೂ ಆಗಿತ್ತು. ಎಲ್ಲರಿಗೂ ಇಷ್ಟವೂ ಆಗಿತ್ತು. ನಾನು ಬೇರೆ ಊರಿನಲ್ಲಿದ್ದಿದ್ದರಿಂದ ಹುಡುಗನ ಫೋಟೋವನ್ನು ವಾಟ್ಸಾಪ್‌ನಲ್ಲಿ ಕಳುಹಿಸಿ, 'ನೋಡು ನಿನಗೆ ಇಷ್ಟವಾದರೆ, ಮಾತುಕತೆ ಮುಂದುವರೆಸೋಣ' ಎಂದು ಅಮ್ಮ ಫೋನಾಯಿಸಿದ್ದರು. ಮನೆಯವರ ಇಚ್ಛೆಯಂತೆ ನಾನು ನಡೆಯುವೆ ಎಂದು ನಾನು ಮೊದಲೇ ದೃಢ ಸಂಕಲ್ಪ ಕೈಗೊಂಡಿದ್ದರಿಂದ ನೀವು ಹೇಗೆ ಹೇಳುತ್ತೀರೋ ಹಾಗೇ ಎಂದು ಹೇಳಿದೆ. ನಮ್ಮ ಕಡೆ ಮೊದಲೇ ಫೋಟೋ , ಜಾತಕ ತೋರಿಸಿ ಎಲ್ಲವೂ ಸರಿಹೊಂದಿದ ಮೇಲೆ ಹುಡುಗ-ಹುಡುಗಿಯ ಅನುಮತಿ ಮೇರೆಗೆ ಸಂಪ್ರದಾಯದಂತೆ ವಧುಪರೀಕ್ಷೆ ಮಾಡುತ್ತಾರೆ. ಅದರಂತೆ ಒಂದು ಒಳ್ಳೇ ಮೂಹರ್ತವನ್ನು ನೋಡಿ ದಿನಾಂಕವನ್ನು ನಿಗದಿಪಡಿಸಿದ್ದರು. ಮೂರು ದಿನಗಳ ಮುಂಚೆಯೇ ಮನೆಯಲ್ಲಿರಬೇಕು ಎಂದು ಅಮ್ಮ ತಾಕೀತು ಮಾಡಿದ್ದರೂ ರಜೆ ಸಿಗದ ಕಾರಣ ವಧುಪರೀಕ್ಷೆಯ ಹಿಂದಿನ ದಿನದ ಮುಸ್ಸಂಜೆ ವೇಳೆ ಮನೆ ತಲುಪಬೇಕಾಯಿತು.

ಮನೆ ತಲುಪಿದ ಎಷ್ಟೋತ್ತಾದರೂ ಅಪ್ಪ-ಅಮ್ಮನ ಸುಳಿವೇ ಇರಲಿಲ್ಲ. ಅಕ್ಕ-ನಾನು ಕಾದು ಕಾದು ಸಾಕಾಯಿತು. ಎರಡು ತಾಸಿನ ಬಳಿಕ ಕಾರಿನಲ್ಲಿ ಅವರ ತಮ್ಮ ಹಾಗೂ ಅವರ ಪತ್ನಿಯೊಂದಿಗೆ ನನ್ನ ಅಮ್ಮ ಬಂದರು. ಅಮ್ಮ ಮಾತ್ರ ಅತ್ತಿಂದಿತ್ತ ಗಾಬರಿಯಲ್ಲೇ ಓಡಾಡುತ್ತಿದ್ದರು. ಏನಾಯಿತು ಎಂದು ಕೇಳಿದರೆ 'ಏನಿಲ್ಲ ಮೊದಲು ಊಟ ಮಾಡು ಸುಸ್ತಾಗಿರತ್ತೆ ನಿಂಗೆ' ಎಂದು ಹೇಳಿ ಕಾಫಿ ಮಾಡಿ ಪ್ಲಾಸ್ಟಿಕ್‌ನಲ್ಲಿ ಹಾಕಿ ತಮ್ಮನ ಕೈಗೆ ಕೊಟ್ಟು ಕಳುಹಿಸಿದರು. ಅಪ್ಪ ಮಾತ್ರ ಕಾಣಲೇ ಇಲ್ಲ. ಬಳಿಕ ಅಮ್ಮನಿಗೆ ಪ್ರಶ್ನೆಗಳ ಸುರಿಮಳೆಗೈದೆ. ಅದೇ ವೇಳೆ ಅಮ್ಮನ ಮೊಬೈಲಿಗೆ ಒಂದು ಕರೆ ಬಂದಿತು. ಆಮೇಲೆ ಬಾಯಿಬ್ಬಿಟ್ಟರು. ಅಪ್ಪನಿಗೆ ಅಪಘಾತವಾಗಿ ಆಸ್ಪತ್ರೆಗೆ ಸೇರಿಸಿದ್ದೇನೆಂದು. ಅಕ್ಕ ನಾನು ಆ ತಡರಾತ್ರಿಯಲ್ಲೇ ಆಸ್ಪತ್ರೆಗೆ ತೆರಳಿ ಅತ್ತು-ಕರೆದು ಮಧ್ಯರಾತ್ರಿವರೆಗೂ ಇದ್ದು ಮನೆಗೆ ಬಂದಿದ್ದಾಯಿತು.

ವರನ ಮನೆಯವರು ಮನೆಗೆ ಬಂದಾಗ ನನ್ನ ತಂದೆ ತಾಯಿಯೇ ಕಾರ್ಯಕ್ರಮ ನಡೆಸಿಕೊಡಬೇಕೆಂಬುದು ನನ್ನ ಮಹದಾಸೆಯಾಗಿತ್ತು. ಆದರೆ, ಅಪ್ಪನಿಲ್ಲದೇ ಹೇಗೆ ಬೇಡವೆಂದು ಹೇಳೋಣ ಎಂದರೆ ಎಲ್ಲಾ ತಯಾರಿಯೂ ಆಗಿದೆ. ಹಟಮಾಡಬೇಡ ಎಂದು ಸಂಬಂಧಿಕರು ಮನವೊಲಿಸಿದರು. ಕೊನೆಗೆ ನನ್ನ ದೊಡ್ಡಪ್ಪ ಹಾಗೂ ದೊಡ್ಡಮ್ಮ ಮುಂದೆ ನಿಂತು ಎಲ್ಲಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವರನನ್ನು ಹೊರತುಪಡಿಸಿ ಅವರ ಕಡೆಯವರಿಗೂ ಈ ವಿಷಯವನ್ನು ತಿಳಿಸಿರಲಿಲ್ಲ. ಅವರ ಮನೆಯವರು ಹಾಡು ಹಾಡಲು ತಿಳಿಸಿದಾಗ , ಅಕ್ಕನೊಂದಿಗೆ ಹಾಡುವಾಗ ಕಣ್ಣಲ್ಲಿ ನೀರು ಬೋರ್ಗರೆಯಿತು. ಹುಡುಗನ ಅಪ್ಪ ಏನಾಯಿತು ಎಂದು ನನ್ನ ಸೋದರ ಮಾವನಿಗೆ ಕೇಳಿದಾಗ ಉತ್ತರಿಸಬೇಕಾಯಿತು. ಯಾವ ಹೆಣ್ಣಿಗಾಗಲಿ ತನ್ನ ತಂದೆಯ ಉಪಸ್ಥಿತಿ ಆಕೆಯ ಜೀವ ನದಲ್ಲಿ ಬಹು ಮುಖ್ಯ ಹಾಗೂ ಪ್ರಿಯವೆನಿಸುತ್ತದೆ. ಅಂದು ಅಪ್ಪನನ್ನು ನೆನೆದು ಕಣ್ಣೀರು ಹರಿದರೂ, ದೊಡ್ಡಪ್ಪ-ದೊಡ್ಡಮ್ಮ ಮುಂದೆ ನಿಂತು ನಡಿಸಿಕೊಟ್ಟಿದ್ದು ಖುಷಿ ಕೊಟ್ಟಿತ್ತು. ಈಗ ಅದೇ ಹುಡುಗನ್ನೊಟ್ಟಿಗೆ ಹಸಮಣೆಯನ್ನೇರುವ ಸಮಯವನ್ನೂ ನಿಗದಿಸಲಾಗಿದೆ. ಅಪ್ಪನೂ ಚೇತರಿಸಿಕೊಳ್ಳುತ್ತಿದ್ದಾರೆ.

**ನಿಮ್ಮ ವಧುಪರೀಕ್ಷೆಯ ನೆನಪುಗಳು ಇದ್ದರೆ ಬರೆದು ಕಳುಹಿಸಿ. ಪದ ಮಿತಿ 350.**
**vivah@vishwavani.news**

ಘಂಟೆ, ಒಗ್ಗರಣೆ ಸದ್ದಿನೊಂದಿಗೆ ನನ್ನ ದಿನ ಶುರುವಾಗಬೇಕೆ ಹೊರತು, ಗಂಟಿಕ್ಕಿದ್ದ ಮುಖದೊಂದಿಗೆ ಅಲ್ಲ, ಉಪವಾಸವಿದ್ದರೂ ಊಳಿಡದೇ ಗೆದ್ದೇ ಗೆಲ್ಲುವೆನೆಂಬ ದುಷ್ಟಾಲೋಚನೆ ಕಡ್ಡಾಯ.



# ಅವಳೊಂದು ಮೂರ್ತಿ ಅಲ್ಲ ಸ್ಫೂರ್ತಿ

• ರಮೇಶ್ ಮೇಳಕುಂದ

ಅವಳು ಹಾಗಿರಬೇಕು, ಹೀಗಿರಬೇಕು, ನಾನು ಹೇಳಿದ್ದಂತೆ ಇರಬೇಕು ಎಂದು ಹೇಳಲು ಹೊರಟರೇ ಬ್ರಹ್ಮನಿಗೆ ಒಂದು ಅರ್ಜಿಯನ್ನಾದ್ದರೂ ಸಲ್ಲಿಸಬಹುದಿತ್ತೇನೋ. ಆದರೆ ಆ ಅವಕಾಶ ಪಾಪಿ ದೇವರು ನೀಡಿಲ್ಲ. ಅದಕ್ಕಾಗಿಯೇ ಹೀಗೆ ಹುಚ್ಚಾಪಟ್ಟೆ ನಿರೀಕ್ಷೆಗಳನ್ನು ಇಟ್ಟುಕೊಂಡು ಅವಳ ಹುಡುಕಾಟಕ್ಕೆ ತೊಡಗುವುದು ಹುಚ್ಚಾಟ. ಆದರೂ ಜೀವನಪೂರ್ತಿ ಜತೆಗಿರುವ ಅವಳ ಬಗ್ಗೆಯೊಂದು ಸ್ಪಷ್ಟ ಕನಸ್ಸಿಲ್ಲದ್ದಿದ್ದರೆ ಜೀವನ ಹೂವಿಲ್ಲದ ಗುಲಾಬಿ ಗಿಡದಂತೆ ಅಲ್ಲವೇ? ಅದಕ್ಕಾಗಿಯಾದರೂ ಹೀಗೊಂದಿಷ್ಟು ಹಳವಂಡಗಳು, ಕನಸುಗಳು, ಕನವರಿಕೆಗಳು..

ಅಪ್ಪ-ಅಮ್ಮ, ಸಂಬಂಧಿಕರೊಂದಿಗೆ ಹೊಂದಿಕೊಂಡು ಹೋಗಬೇಕು, ಸುಂದರವಾಗಿರಬೇಕು, ಅಡುಗೆ ಮಾಡಿಕೊಂಡು ಇರಬೇಕು, ನನ್ನ ಸೇವೆ ಮಾಡುತ್ತಲೇ ಜೀವನ ದೂಡಬೇಕು... ಹೀಗೆ ಪಟ್ಟಿ ಮಾಡುತ್ತಾ ಹೋದರೆ ನನಗೆ ಸರ್ವಾಧಿಕಾರಿ ಅಥವಾ ಜೀತಕ್ಕಿಟ್ಟುಕೊಂಡ ಮಾಲೀಕ ಎನ್ನಬಹುದೇನೋ. ಅಲ್ಲ ಇದ್ಯಾವುದು ನನಗೆ ಮುಖ್ಯವೇ ಅಲ್ಲ. ಅವಳು ಜೀತದಾಳೂ ಅಲ್ಲ, ನನ್ನ ಜೀವನದ ಸಂಗಾತಿ. ಅವಳು ಅವಳಾಗಿರಬೇಕೆ ಹೊರತು ಯಾರದ್ದೋ ಕೈಗೊಂಬೆಯಲ್ಲ. ಅವಳೂ ಸ್ವಾತಂತ್ರ್ಯ, ಚಿಂತನೆಗೆ, ಸ್ವಂತ ಆಸೆಗಳನ್ನು ಈಡೇರಿಸಿಕೊಳ್ಳಲು ಅರ್ಹಳು. ಅವಳಿಗೂ ಅವಳದ್ದೇ ಕಲ್ಪನೆಗಳಿರುತ್ತವೆ. ನನಗೆ ದುಃಖದಲ್ಲಿದ್ದಾಗ ಹೋಗ್ಲಿ ಬಿಡಲೇ ಎಂದು ಹೇಳುವ ಗೆಳೆಯರಂತೆ 'ಹೋಗ್ಲಿ ಬಿಡೋ ಇದಿಲ್ಲದಿದ್ದರೇ ಮತ್ತೊಂದು ಎನ್ನುವ' ಗಟ್ಟಿಗಿತ್ತಿ ನನ್ನವಳಾಗಿರಬೇಕು. ಅವಳೊಂದು ಮೂರ್ತಿ ಅಲ್ಲ ಸ್ಫೂರ್ತಿ. ನಿತ್ಯ ಬೆಳಗ್ಗೆ ಎದ್ದು ಅವಳದ್ದೇ ಮುಖ ಎದುರಿರಬೇಕು. ಅದೆಲ್ಲೋ ಅಡುಗೆ ಮನೆಯಲ್ಲಿ ಒಗ್ಗರಣೆ ಹಾಕುತ್ತಾ, ದೇವರ ಕೋಣೆಯಲ್ಲಿ ಪೂಜೆ ಮಾಡುತ್ತಾ ಕುಳಿತ್ತಿದ್ದರೂ ಏಳುವ ಮುಂಚೆ ನನ್ನ ಮುಂದೆ ಮಂದಹಾಸದಿಂದ ಹಾದು ಹೋದರೆ ಅದೇನೋ ಚೈತನ್ಯ ಮೂಡುತ್ತಿರಬೇಕು. ಘಂಟೆ, ಒಗ್ಗರಣೆ ಸದ್ದಿನೊಂದಿಗೆ ನನ್ನ ದಿನ ಶುರುವಾಗಬೇಕೆ ಹೊರತು. ಗಂಟಿಕ್ಕಿದ್ದ ಮುಖದೊಂದಿಗೆ ಅಲ್ಲ. ಉಪವಾಸವಿದ್ದರೂ ಊಳಿಡದೇ ಗೆದ್ದೇ ಗೆಲ್ಲುವೆನೆಂಬ ದುಷ್ಟಾಲೋಚನೆ ಕಡ್ಡಾಯ.

ಒಂದಿಷ್ಟು ಹುಚ್ಚಾಪಟ್ಟೆ ಕನಸುಗಳಿದ್ದರೆ ಜೀವನಕ್ಕೆ ಅದೇನೋ ಚೈತನ್ಯ. ಊರೂರು ಸುತ್ತುವ ಹುಚ್ಚಾಟ, ಉಡುಗೆಯಲ್ಲಿ ಫ್ಯಾಶನ್, ತಿನ್ನುವುದು, ಓದುವುದು ಒಂದಿಷ್ಟು ಮಿತಿಮೀರಿ, ವಾಚಾಳಿ ಎನ್ನುವಷ್ಟು ಗೊಣಗಾಟ ಇದ್ದರೇ ಚೆಂದ. ನಾವು ಬದುಕುವುದೇ ಸಂತೋಷಕ್ಕಾಗಿ ಎಂದಮೇಲೆ ಹಣ, ಸಿಂಗಾರ, ಬಟ್ಟೆ, ಬಂಗಾರ ಇದ್ದರೇ ಬದುಕುತ್ತೇನೆ ಎಂಬ ಧಾಷ್ಟ್ರ್ಯವಿದ್ದವರೂ ನಮ್ಮ ಸಮೀಪವೂ ಸುಳಿಯುವುದು ಅಪಾಯಕರ. ಸಹನೆಯ ಕಟ್ಟೆ ಒಡೆದರೂ ಸಹಾನುಭೂತಿ ಇಲ್ಲದಿದ್ದರೇ ವ್ಯರ್ಥವಲ್ಲವೇ. ಹಾಗಂತ ಎಲ್ಲ ಇದ್ದರೂ ಬೇಕಾಬಿಟ್ಟಿಯಾಗಿರಬೇಕು ಎಂದು ಕಟ್ಟುಪಾಡುಗಳಿಲ್ಲ. ಥೂ.. ಈ ಜೀವನವೇ ಇಷ್ಟು ಎಂದು ಬೇಸರಿಸಿಕೊಳ್ಳದೆ ನಗುನಗುತಾ ಜೀವನ ದೂಡುವುದು ಮನಸ್ಸಿಗೆ ನೆಮ್ಮದಿ ನೀಡುತ್ತದೆ.

ವಿಚಿತ್ರ, ವಿಲಕ್ಷಣ ಮತ್ತು ನನ್ನ ಚಿತ್ತ ಬಿತ್ತಿಯನ್ನು ಸೆರೆ ಹಿಡಿಯುವ ಮೋಹಕ ತಾರೆಯಾಗುವ ಜತೆಗೆ, ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಹೊಂಗಿರಣ. ಅವಳ ಮುಗ್ಧತೆ, ಕಾರುಣ್ಯ, ಕಾಳಜಿ, ಮೌನ, ಮಳೆ ನಿಂತ ಮೇಲೆ ಮನಸ್ಸಿಗೆ ಮುದ ನೀಡುವ ಹನಿಗಳಂತಹ ಮಂದಹಾಸ ಸದಾ ಇರಲಿ ಎಂದು ಹಾರೈಸುವೆ. ನನ್ನ ಹೃದಯದಲ್ಲಿ ಸ್ಥಳ ನೀಡಿದ್ದೇನೆ ಎಂಬ ಭ್ರಮೆಯಲ್ಲಿರದೇ, ಅದರ ಒಡತಿಯಾಗಿರಲಿ... ಅಷ್ಟೇ ಸಾಕು.

**ಸಂಗಾತಿ ಬಗ್ಗೆ ಕನಸು ಕಾಣೋಕೆ ಕಾಸು ಕೊಡಬೇಕಿಲ್ಲ. ನಿಮ್ಮ ಕನಸಿನ ಅರಮನೆಯಲ್ಲಿರುವವರ ಬಗ್ಗೆ ನೀವೂ ಬರೆಯಬಹುದು. ಪದ ಮಿತಿ 350.**